**135/21-K**

**Question Booklet Alpha Code**

**A**

A

Question Booklet Sl. No.

**Total Number of Questions : 100** **Time : 75 Minutes**

**Maximum Marks : 100**

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted alpha code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same alpha code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same alpha code. This is most important.
8. A blank sheet of paper is attached to the Question Booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. ''ಎರಲ್ನಾಡ್ ಉದೈವಾರ್'' ಎಂಬ ಯೆಹೂದಿ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಆಳುವವ ಯಾರು ?
   - A) ಕೊಲಾತಿರಿ
   - B) ಚೇರ ಅರಸರು
   - C) ಸಮುತಿರಿಯರು
   - D) ಸಕ್ತನ್ ತಂಬುರಾನ್

2. ಪಂಡಿತ್ ಕುರುಪನ್ ರಚಿಸಿದ ಸಮೂಹ (ಸಭೆ)ಗಳು ಈ ಕೆಳಗಿನವುಗಳಲ್ಲಿ ಯಾವುವು ?
   - i) ಸುಧರ್ಮ ಸೂರ್ಯೋದಯ ಸಭಾ
   - ii) ಜ್ಞಾನೋದಯ ಸಭಾ
   - iii) ಸ್ವತಂತ್ರ ಸಹೋದಾರ್ಯ ಸಭಾ
   - iv) ಷಣ್ಮುಖ ವಿಲಾಸಮ್ ಸಭಾ
   - A) ಕೇವಲ (ii) ಮತ್ತು (iii)
   - B) ಮೇಲಿನ ಎಲ್ಲವೂ (i), (ii), (iii) ಮತ್ತು (iv)
   - C) ಕೇವಲ (i) ಮತ್ತು (ii)
   - D) ಕೇವಲ (i), (ii) ಮತ್ತು (iv)

3. ಒಲಿಂಪಿಕ್ಸ್‌ನಲ್ಲಿ ಭಾರತವು ಹಾಕಿಯಲ್ಲಿ ಎಷ್ಟು ಪದಕಗಳನ್ನು ಗೆದ್ದಿದೆ ?
   - A) 8 ಚಿನ್ನ, 1 ಬೆಳ್ಳಿ ಮತ್ತು 3 ಕಂಚು
   - B) 8 ಚಿನ್ನ, 2 ಬೆಳ್ಳಿ ಮತ್ತು 3 ಕಂಚು
   - C) 8 ಚಿನ್ನ, 2 ಬೆಳ್ಳಿ ಮತ್ತು 2 ಕಂಚು
   - D) 8 ಚಿನ್ನ ಮತ್ತು 3 ಕಂಚು

4. ಪಟ್ಟಿ – I ರಲ್ಲಿ ಇರುವ ಘಟನೆಗಳನ್ನು ಪಟ್ಟಿ – II ರಲ್ಲಿರುವ ವರ್ಷಗಳೊಂದಿಗೆ ಜೋಡಿಸಿ, ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| **ಪಟ್ಟಿ – I (ಘಟನೆಗಳು)** | **ಪಟ್ಟಿ – II (ವರ್ಷಗಳು)** |
|---|---|
| a) ಅಸಹಕಾರ ಚಳುವಳಿ | 1) 1934 |
| b) ಉಪ್ಪಿನ ಸತ್ಯಾಗ್ರಹ | 2) 1942 |
| c) ಕಾಂಗ್ರೆಸ್ ಸಮಾಜವಾದಿ ಪಕ್ಷದ ರಚನೆ | 3) 1930 |
| d) ಭಾರತ ಬಿಟ್ಟು ತೊಲಗಿ ಚಳುವಳಿ | 4) 1920 |

| | **a** | **b** | **c** | **d** |
|---|---|---|---|---|
| A) | 4 | 2 | 1 | 3 |
| B) | 4 | 3 | 1 | 2 |
| C) | 2 | 4 | 3 | 1 |
| D) | 1 | 3 | 4 | 2 |

5. ನೆಪೋಲಿಯನ್‌ಗೆ ಸಂಬಂಧಿಸಿದ ವಾಕ್ಯಗಳಲ್ಲಿ ಸರಿಯಾದದ್ದು ಯಾವುದು ?
   i) ಆರ್ಥಿಕವಾಗಿ ಯುನೈಟೆಡ್ ಕಿಂಗ್‌ಡಮ್ ವಿರುದ್ಧ ಯುರೋಪನ್ನು ಸಜ್ಜಾಗಿಸಲು ಕಾಂಟಿನೆಂಟಲ್ ದಿಗ್ಬಂಧವನ್ನು ಪರಿಚಯಿಸಿದನು.
   ii) ಫ್ರಾನ್ಸ್‌ನಲ್ಲೊಂದು ಕಾನೂನಿನ ಸಂಹಿತೆಯನ್ನು ಪರಿಚಯಿಸಿದನು.
   iii) ಸಭೆಯಲ್ಲಿ ಆಜ್ಞೆಗಳನ್ನು ಹೊರಡಿಸಿದನು.
   A) ಕೇವಲ (i) ಮತ್ತು (iii)
   B) ಕೇವಲ (ii) ಮತ್ತು (iii)
   C) ಮೇಲಿನ ಎಲ್ಲವೂ
   D) ಕೇವಲ (i) ಮತ್ತು (ii)

6. ಸಾಂಪ್ರದಾಯಿಕ ಭೂಗೋಳಶಾಸ್ತ್ರದ ಅಧ್ಯಯನವನ್ನು ಪ್ರಾರಂಭಿಸಿದವರು ಯಾರು ?
   A) ಕಾರ್ಲ್ ರಿಟ್ಟರ್
   B) ಅಲೆಕ್ಸಾಂಡರ್ ಹಮ್‌ಬೋಲ್ಟ್
   C) ಲಾಪ್ಲೇಸ್
   D) ಎಡ್ವಿನ್ ಹಂಬಲ್

7. ಯಾವ ರಾಜ್ಯದಿಂದ ಉತ್ತರಧ್ರುವ ರೇಖೆಯು ಹಾದು ಹೋಗುವುದಿಲ್ಲ ?
   A) ರಾಜಸ್ಥಾನ B) ಛತ್ತಿಸ್‌ಗಢ C) ಒರಿಸ್ಸಾ D) ತ್ರಿಪುರ

8. ಜ್ವಾಲಾಮುಖಿಯ ಸ್ಫೋಟದಿಂದ ರಚಿಸಲ್ಪಡುವ ಶಿಲೆ ಯಾವುದು ?
   A) ಅಗ್ನಿ ಶಿಲೆ
   B) ಸಂಚಿತ ಶಿಲೆ
   C) ರೂಪಾಂತರಿತ ಶಿಲೆ
   D) ಮೇಲಿನ ಯಾವುದೂ ಅಲ್ಲ

9. ಭಾರತದಲ್ಲಿ ಅತೀ ಹೆಚ್ಚು ಭತ್ತವನ್ನು ಉತ್ಪಾದಿಸುವ ರಾಜ್ಯ
   A) ಆಂಧ್ರಪ್ರದೇಶ B) ಉತ್ತರಪ್ರದೇಶ C) ಪಶ್ಚಿಮ ಬಂಗಾಲ D) ಹರಿಯಾಣ

10. ಯಾವ ರಾಷ್ಟ್ರವು COP 26 UN ವಾತಾವರಣ ಬದಲಾವಣೆ ಸಮ್ಮೇಳನದ ಆತಿಥ್ಯವನ್ನು ಕೈಗೆತ್ತಿಕೊಂಡಿತ್ತು ?
   A) ಯುಕೆ B) ಭಾರತ C) ಚೀನಾ D) ಬ್ರೆಜಿಲ್

11. ಕೃಷಿ ಮತ್ತು ಹಳ್ಳಿಗಳ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಭಾರತದ ಅತೀ ಉನ್ನತ ಬ್ಯಾಂಕ್ ಈ ಕೆಳಗಿನವುಗಳಲ್ಲಿ ಯಾವುದು ?
   A) IDFC B) IDBI C) ಮುದ್ರಾ ಬ್ಯಾಂಕ್ D) ನಬಾರ್ಡ್

12. ಕೇಂದ್ರ ಯೋಜನಾ ಸಮಿತಿಯ ಬದಲು ನೀತಿ ಆಯೋಗವು ಆರಂಭಗೊಂಡದ್ದು ಯಾವಾಗ ?
   A) 2014 B) 2015 C) 2019 D) 2016

13. ಭಾರತವು ಯಾರ ಸರಕಾರಾವಧಿಯಲ್ಲಿ ಹೊಸ ಆರ್ಥಿಕ ಕಾರ್ಯನೀತಿಯನ್ನು ಸ್ವೀಕರಿಸಿತು ?
   A) ನರಸಿಂಹ ರಾವ್
   B) ರಾಜೀವ್ ಗಾಂಧಿ
   C) ಲಾಲು ಪ್ರಸಾದ್ ಯಾದವ್
   D) ವಾಜಪೇಯಿ

14. ಸ್ವತಂತ್ರ ಭಾರತದ 'ಪ್ಲಾನ್ ಹಾಲಿಡೇ' ಅವಧಿಯು ಈ ಕೆಳಗಿನವುಗಳಲ್ಲಿ ಯಾವುದು ?
A) 1966 – 1969 B) 1978 – 1980 C) 1984 – 1987 D) 1993 – 1995

15. SBIನ ಆನ್‌ಲೈನ್ ಮೊಬೈಲ್ ಎಪ್ಲಿಕೇಶನ್ 'YONO' ಇದರ ಬ್ರಾಂಡ್ ರಾಯಭಾರಿ ಯಾರು ?
A) ಸೈನಾ ನೆಹವಾಲ್ B) ಪಿ.ವಿ. ಸಿಂಧು C) ಹಿಮಬರ್ಮನ್ D) ಸ್ರೀಜೇಶ್

16. ರಾಜ್ಯಸಭೆಯ ಸದಸ್ಯರ ಅಧಿಕಾರಾವಧಿ ಎಷ್ಟು ?
A) 5 ವರ್ಷಗಳು B) 6 ವರ್ಷಗಳು C) 2 ವರ್ಷಗಳು D) 3 ವರ್ಷಗಳು

17. ಕೇರಳ ಮಹಿಳಾ ಆಯೋಗದ ಅಧ್ಯಕ್ಷರು ಯಾರು ?
A) ಜೋಸೆಫೀನ್
B) ನ್ಯಾಯಾಧೀಶೆ ಶ್ರೀದೇವಿ
C) ನ್ಯಾಯಾಧೀಶೆ ಫಾತಿಮಾ ಬೀವಿ
D) ಪಿ. ಸತೀ ದೇವಿ

18. ಸಂವಿಧಾನ ಸಭೆಯ ಅಧ್ಯಕ್ಷರು ಯಾರು ?
A) ಡಾ. ಬಿ.ಆರ್. ಅಂಬೇಡ್ಕರ್
B) ಮೋತಿಲಾಲ್ ನೆಹರೂ
C) ಡಾ. ರಾಜೇಂದ್ರ ಪ್ರಸಾದ್
D) ಜವಾಹರಲಾಲ್ ನೆಹರೂ

19. ಕೆಳಗಿನವುಗಳಲ್ಲಿ ಯಾವುದು ಮೂಲಭೂತ ಹಕ್ಕು ಅಲ್ಲ ?
A) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು
B) ಸಾಂವಿಧಾನಿಕ ಪರಿಹಾರಗಳ ಹಕ್ಕು
C) ಶೋಷಣೆಯ ವಿರುದ್ಧದ ಹಕ್ಕು
D) ಆಸ್ತಿ ಹಕ್ಕು

20. ಸಂವಿಧಾನದ ಯಾವ ಆರ್ಟಿಕಲ್ ಪ್ರಕಾರ, ಕೇರಳ ಶಾಸಕಾಂಗ ಸಭೆಯು ಕೇರಳ ಸೇವಾ ನಿಯಮಗಳನ್ನು ಅನುಮೋದಿಸಿದೆ ?
A) ಆರ್ಟಿಕಲ್ 309 B) ಆರ್ಟಿಕಲ್ 356 C) ಆರ್ಟಿಕಲ್ 326 D) ಆರ್ಟಿಕಲ್ 32

21. ಭಾರತದ ಪ್ರಥಮ ವಿದೇಶಿ ಸಚಿವರು ಯಾರು ?
A) ಕೆ.ಪಿ.ಎಸ್. ಮೆನನ್
B) ಲಾಲ್ ಬಹಾದ್ದೂರ್ ಶಾಸ್ತ್ರಿ
C) ಜವಾಹರಲಾಲ್ ನೆಹರೂ
D) ಗುಲ್ಸಾರಿಲಾಲ್ ನಂದ

22. ಕೇರಳ ಸಾರ್ವಜನಿಕ ಸೇವಾ ಆಯೋಗದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ ?
A) ರಾಷ್ಟ್ರಪತಿ
B) ಪ್ರಧಾನ ಮಂತ್ರಿ
C) ಗವರ್ನರ್
D) ಮುಖ್ಯ ಕಾರ್ಯದರ್ಶಿ

23. ಕೆಳಗಿನವರಲ್ಲಿ ರಾಜ್ಯಸಭೆಯ ಸಭಾಧ್ಯಕ್ಷರು ಯಾರು ?
A) ಉಪರಾಷ್ಟ್ರಪತಿ B) ಸ್ಪೀಕರ್ C) ರಾಷ್ಟ್ರಪತಿ D) ಉಪಸಭಾಧ್ಯಕ್ಷ

24. ಕೇರಳ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಯಾರು ನೇಮಿಸುತ್ತಾರೆ ?
A) ಗವರ್ನರ್
B) ರಾಷ್ಟ್ರಪತಿ
C) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ
D) ಮುಖ್ಯಮಂತ್ರಿ

25. ಕಥಕ್ಕಳಿ ಅಭಿನಯದ ಸಾಹಿತ್ಯಿಕ ಸ್ವರೂಪದ ಹೆಸರೇನು ?
   A) ರಮನಟ್ಟಮ್ B) ಕೃಷ್ಣನಟ್ಟಮ್ C) ಆಟ್ಟಕ್ಕಥ D) ರಾಮಚರಿತಮ್

26. ಪ್ಯಾರಾಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಪ್ರಥಮ ಭಾರತೀಯ ಯಾರು ?
   A) ಸೈನಾ ನೆಹವಾಲ್ B) ಅವನಿ ಲೆಖಾರ C) ಸಾಕ್ಷಿ ಮಲಿಕ್ D) ಮೇರಿ ಕೋಮ್

27. ಈ ಕೆಳಗಿನವುಗಳಲ್ಲಿ ಡಿ. ವಿನಯಚಂದ್ರನ್‌ನ ಕೃತಿ ಯಾವುದು ಆಗಿರುವುದಿಲ್ಲ ?
   A) ವೀಟಿಲೆಕ್ಕುಲ್ಲ ವಳ್ಳಿ B) ಪೊಡಿಚಿ C) ಕಿರತವೃತಮ್ D) ಚಿರಾಪ್ಪು

28. ವರ್ಕಲವೆಂಬಲ್ಲಿ 'ಶ್ರೀನಾರಾಯಣ ಗುರುಕುಲ'ವನ್ನು ಯಾರು ಸ್ಥಾಪಿಸಿದರು ?
   A) ಚಟ್ಟಂಬಿ ಸ್ವಾಮಿಗಲ್ B) ನಿತ್ಯ ಚೈತನ್ಯಯತಿ
   C) ನಟರಾಜಗುರು D) ಸ್ವಾಮಿ ಮಂಗಲಾನಂದ

29. ಪ್ರಥಮ ಅಂತರರಾಷ್ಟ್ರೀಯ ಹಗಲು–ರಾತ್ರಿಗಳ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ದೇಶಗಳ ಜೋಡಿ ಯಾವುದು ?
   A) ಆಸ್ಟ್ರೇಲಿಯಾ – ಇಂಗ್ಲೆಂಡ್ B) ಆಸ್ಟ್ರೇಲಿಯಾ – ಭಾರತ
   C) ಆಸ್ಟ್ರೇಲಿಯಾ – ದಕ್ಷಿಣ ಆಫ್ರಿಕಾ D) ಆಸ್ಟ್ರೇಲಿಯಾ – ನ್ಯೂಜಿಲ್ಯಾಂಡ್

30. ಕೆಳಗಿನವುಗಳಲ್ಲಿ ಆಪ್ಟಿಕಲ್ ಡಿಸ್ಕ್ ವಿಭಾಗಕ್ಕೆ ಸೇರದಿರುವುದು ಯಾವುದು ?
   A) ಸಿಡಿ B) ಡಿವಿಡಿ C) ಹಾರ್ಡ್ ಡಿಸ್ಕ್ D) ಬ್ಲೂ–ರೇ ಡಿಸ್ಕ್

31. ನಿಬಲ್ (Nibble) ಎಂದರೆ
   A) 4 ಬಿಟ್ B) 8 ಬಿಟ್ C) 12 ಬಿಟ್ D) 16 ಬಿಟ್

32. ಒಂದು ಕಛೇರಿ ಅಥವಾ ಕಟ್ಟಡದ ಕಂಪ್ಯೂಟರ್‌ಗಳ ನಡುವೆ ನೆಟ್‌ವರ್ಕ್ ಕನೆಕ್ಟೆಡ್‌ನ್ನು _________ ಎಂದು ಕರೆಯುತ್ತಾರೆ.
   A) PAN B) LAN C) WAN D) MAN

33. ಸರಕಾರದ ಆದಾಯ ಮತ್ತು ಸೇವಾ ಮಾಹಿತಿಗಳನ್ನು ಒಳಗೊಂಡಿರುವ ಎಪ್ಲಿಕೇಶನ್ ಈ ಕೆಳಗಿನವುಗಳಲ್ಲಿ ಯಾವುದು ?
   A) ಸಂಚಯ B) ಸೇವನ C) ಸ್ಪಾರ್ಕ್ D) ಸಮಗ್ರ

34. ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರನ್ನು ಕೇಂದ್ರ ಸರಕಾರವು ಯಾವ ಸಂದರ್ಭದಲ್ಲಿ ತೆಗೆದುಹಾಕಬಹುದು ?
   i) ಅಧ್ಯಕ್ಷರು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಒಪ್ಪಿಕೊಳ್ಳದೇ ಇದ್ದಾಗ.
   ii) ಜವಾಬ್ದಾರಿಗಳನ್ನು ನಿಭಾಯಿಸಲು ಅಧ್ಯಕ್ಷರಲ್ಲಿ ಸಾಮರ್ಥ್ಯವಿಲ್ಲದಿದ್ದಾಗ.
   iii) ಅವರು ಅನಿರ್ಬಂಧಿತವಾಗಿ ಬಡವರಾದಾಗ.
   iv) ಆಯೋಗದ ಯಾವುದೇ ಸಭೆಗಳಲ್ಲಿ ಭಾಗವಹಿಸಲು ಅವರಿಂದ ಅಸಾಧ್ಯವಾದಾಗ.
   A) (i) ರಿಂದ (iv) ನೆಯ ಸಂದರ್ಭಗಳು B) ಕೇವಲ (i), (ii) ಮತ್ತು (iv) ನೆಯ ಸಂದರ್ಭಗಳು
   C) ಕೇವಲ (i), (ii) ಮತ್ತು (iii) ನೆಯ ಸಂದರ್ಭಗಳು D) ಕೇವಲ (i), (iii) ಮತ್ತು (iv) ನೆಯ ಸಂದರ್ಭಗಳು

35. 1993ರ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಸಂಪೂರ್ಣವಾಗಿ ಮಾನವಹಕ್ಕುಗಳ ವ್ಯಾಖ್ಯಾನದಲ್ಲಿ ಬರುವಂತಹವುಗಳು ಯಾವುವು ?
   i) ಜೀವ ಮತ್ತು ಆಸ್ತಿ ರಕ್ಷಣೆಯ ಎಲ್ಲಾ ಹಕ್ಕುಗಳು.
   ii) ಕೇವಲ ಭಾರತೀಯ ಸಂವಿಧಾನ ಮತ್ತು ಭಾರತದ ಇತರ ಕಾನೂನುಗಳಲ್ಲಿ ಸೂಚಿತವಾದ ಹಕ್ಕುಗಳು.
   iii) ಭಾರತೀಯ ಸಂವಿಧಾನದಲ್ಲಿ ಸೂಚಿತವಾಗದೇ ಅಂತಾರಾಷ್ಟ್ರೀಯ ಒಪ್ಪಂದಗಳಲ್ಲಿ ಇರುವಂತಹ ಹಕ್ಕುಗಳು.
   iv) ಮೇಲಿನ ಮೂರೂ ವಾಕ್ಯಗಳು ಅಪೂರ್ಣವಾಗಿವೆ.
   A) ಸೂಚನೆಗಳು (i) ಮತ್ತು (iii)
   B) ಸೂಚನೆ (iv)
   C) ಸೂಚನೆ (ii)
   D) ಸೂಚನೆ (iii)

36. 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿರುದ್ಧವಾದ ಹಿಂಸೆಯನ್ನು ತಡೆಯಬಹುದಾದ ನಿಯಮದ ಪ್ರಕಾರ, 'ಹಿಂಸೆ' ಎಂಬ ಪದದ ಅರ್ಥವೇನು ?
   A) ಕಾನೂನಿನ ಭಾಗ – 3ರ ಅಡಿಯಲ್ಲಿ ಬರುವ ಅಪರಾಧಗಳು
   B) ಭಾರತದ ದಂಡ ಸಂಹಿತೆಯಡಿಯಲ್ಲಿ ಬರುವ ಅಪರಾಧಗಳು
   C) ಕಾನೂನಿನ ಭಾಗ – 3 ಮತ್ತು ಭಾಗ – 14ರಡಿಯಲ್ಲಿ ಬರುವ ಅಪರಾಧಗಳು
   D) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡಗಳಿಗೆ ವಿರುದ್ಧವಾದ ಎಲ್ಲಾ ಅಪರಾಧಗಳು

37. ಸಂವಿಧಾನದ ಯಾವ ಅನುಚ್ಛೇದವು ಹಿರಿಯರನ್ನು ಆರೈಕೆ ಮಾಡಿ ಸುಧಾರಿಸುವ ಕಾನೂನನ್ನು ಬೆಂಬಲಿಸುವುದನ್ನು ಒಳಗೊಂಡಿರುತ್ತದೆ ?
   A) 41ನೆಯ ಅನುಚ್ಛೇದ
   B) 4ರಿಂದ 7ನೆಯ ಅನುಚ್ಛೇದ
   C) 25ನೆಯ ಅನುಚ್ಛೇದ
   D) ಮೇಲಿನ ಎಲ್ಲವೂ ತಪ್ಪು

38. ದೇಶೀಯ ಗ್ರಾಹಕ ವಿವಾದ ಪರಿಹಾರ ಆಯೋಗದ ಪ್ರಸ್ತುತ ಅಧ್ಯಕ್ಷರು ಯಾರು ?
   A) ನ್ಯಾಯಾಧೀಶ ಅಶೋಕ್‌ಬನ್
   B) ನ್ಯಾಯಾಧೀಶ ಆರ್. ಕೆ. ಅಗರ್ವಾಲ್
   C) ನ್ಯಾಯಾಧೀಶ ದೀಪಾ ಶರ್ಮಾ
   D) ನ್ಯಾಯಾಧೀಶ ಅರುಣ್‌ಕುಮಾರ್ ಮಿಶ್ರಾ

39. ಪ್ರೀಸ್ಕೂಲ್ ಮಗುವಿನ ಸ್ವಭಾವ ಈ ಕೆಳಗಿನವುಗಳಲ್ಲಿ ಯಾವುದು ಆಗಿರುವುದಿಲ್ಲ ?
   A) ಅನುಕರಿಸುವ ಸ್ವಭಾವ
   B) ಚಲಿಸುವ ಸ್ವಭಾವ
   C) ನಾನು, ನನ್ನದು ಎಂಬ ಮನೋಭಾವ
   D) ದೀರ್ಘವಾದ ಏಕಾಗ್ರತೆಯು ಹೆಚ್ಚಾಗಿರುವುದು

40. ಪ್ರೀ ಪ್ರೈಮರಿ ಸ್ಕೂಲ್‌ಗೆ ತೆರಳುವವರಿಗೆ ಲಯಬದ್ಧವಾದ ಶಬ್ದಗಳನ್ನು ಮಾಡಿ ಅದಕ್ಕನುಗುಣವಾಗಿ ದೇಹದ ಅಂಗಗಳನ್ನು ಚಲಾಯಿಸುವುದಕ್ಕೆ ಕೆಳಗಿನ ಯಾವ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು ?
   A) ಹಣ್ಣುಗಳನ್ನು ತುಂಡರಿಸುವುದು
   B) ಅಭಿನಯ ಗೀತೆ
   C) ಚಿತ್ತಾರಗಳ ಮೇಲೆ ಬರೆಯುವುದು
   D) ಕಾಗದವನ್ನು ತುಂಡರಿಸುವುದು

41. ಬೆನ್ನೆಲುಬಿಗೆ ಪೆಟ್ಟಾದಂತಹ ರೋಗಿಯನ್ನು ಪ್ರಥಮ ಚಿಕಿತ್ಸೆಯ ನಂತರ ಆಸ್ಪತ್ರೆಗೆ ಸ್ಥಳಾಂತರಿಸುವಾಗ ಯಾವ ವಿಧಾನವನ್ನು ಅಳವಡಿಸಿಕೊಳ್ಳಬಹುದು ?
   A) ಪೆಟ್ಟಾದ ಭಾಗವನ್ನು ಚಲಿಸದೇ ಅಧೋಮುಖ ಸ್ಥಿತಿಯಲ್ಲಿಡುವುದು
   B) ಪೆಟ್ಟಾದ ಭಾಗವನ್ನು ಚಲಿಸದೇ ಮೇಲ್ಮುಖ ಸ್ಥಿತಿಯಲ್ಲಿಡುವುದು
   C) ಪ್ರಥಮ ಚಿಕಿತ್ಸೆ ನೀಡಿದ ವ್ಯಕ್ತಿಯ ಹೆಗಲ ಮೇಲೆ ಮಲಗಿಸುವುದು
   D) ಘಾಸಿಗೊಂಡವನನ್ನು ಕುರ್ಚಿಯ ಮೇಲೆ ನೇರವಾಗಿ ಕುಳ್ಳಿರಿಸುವುದು

42. 'ಗುಂಪಿನಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಆಟವಾಡುವುದು' ನೇರವಾಗಿ ಯಾವುದರ ಲಕ್ಷಣಗಳಾಗಿವೆ ?
   A) ಕೇಳುವ ಅಸಮರ್ಥತೆ B) ದೃಷ್ಟಿದೋಷ C) ಮಾತಿನ ಅಸಮರ್ಥತೆ D) ಆಟಿಸ್ಮ್

43. 1834ರಲ್ಲಿ ತಿರುವನಂತಪುರದಲ್ಲಿ ಟ್ರಾವನ್ಕೋರ್‌ನ ಯಾವ ಅರಸನು ಇಂಗ್ಲೀಷ್ ಶಾಲೆಯನ್ನು ಸ್ಥಾಪಿಸಿದನು ?
   A) ಮಾರ್ತಾಂಡವರ್ಮ
   B) ಆಯಿಲ್ಯಮ್ ತಿರುನಾಳ್
   C) ಸ್ವಾತಿ ತಿರುನಾಳ್
   D) ಚಿತ್ತಿರ ತಿರುನಾಳ್

44. ಆದಾಯ ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಒದಗಿಸುತ್ತಿರುವ ಸರಕಾರಿ ಸಂಸ್ಥೆ
   A) SCERT B) SIET C) SIEMAT D) DIET

45. ಪ್ರೀಸ್ಕೂಲ್ ಶಿಕ್ಷಣಕ್ಕೆ ಮಾರ್ಗದರ್ಶನಗಳನ್ನು ನೀಡುವ ಹೇಳಿಕೆ, ''ಮಗುವಿಗೆ ಸಂಬಂಧಿಸಿದಂತೆ, ಆಟ ಮತ್ತು ಕೆಲಸದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ, ಮಗುವಿಗೆ ಪ್ರತಿಯೊಂದು ಆಟವಾಗಿದೆ'' ಎಂದು ಹೇಳಿದವರು ಯಾರು ?
   A) ಟಾಗೋರ್
   B) ನೆಹರೂ
   C) ಗಾಂಧೀಜಿ
   D) ಜಿಡು ಕೃಷ್ಣಮೂರ್ತಿ

46. ಭಾರತೀಯ ಸಂವಿಧಾನದ ಯಾವ ಅನುಚ್ಛೇದವು 6 ವರ್ಷಕ್ಕಿಂತ ಒಳಪಟ್ಟ ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿಯೇ ಶಿಕ್ಷಣ ಮತ್ತು ಆರೈಕೆಯ ಹಕ್ಕನ್ನು ಒದಗಿಸುತ್ತದೆ ?
   A) 21A B) 45 C) 51A D) 43

47. ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗವು ಯಾವ ವರ್ಷದಲ್ಲಿ ಸ್ಥಾಪನೆಗೊಂಡಿತು ?
   A) 2002 B) 2005 C) 2012 D) 2007

48. ಮಾಂಗೋಲಿಸ್ಮ್ ಉಂಟಾಗಲು ಕಾರಣವೇನು ?
   A) ಪಿತ್ತಜನಕಾಂಗದ (liver) ರೋಗಗಳು
   B) ತೂಕದಲ್ಲಿ ಇಳಿಕೆ
   C) ಸೋಂಕು
   D) ವರ್ಣತಂತು ವೈಪರೀತ್ಯಗಳು

49. ರಕ್ತದ ಅಸ್ವಸ್ಥತೆವುಳ್ಳ ತಾಯಿಗೆ ನವಜಾತ ಶಿಶುವಿನಿಂದ ಡಿ– ಆಂಟಿಜನ್‌ನ ರೋಗಪ್ರಸಾರವನ್ನು ನಶಿಸುವುದಕ್ಕಾಗಿ ಮೊದಲ ಹೆರಿಗೆಯಾದ ಕೂಡಲೇ ತಾಯಂದಿರಿಗೆ ನೀಡುವ ಲಸಿಕೆ ಯಾವುದು ?
   A) ಆ್ಯಂಟಿ– ಡಿ ಗಾಮಾ ಗ್ಲೋಬುಲಿನ್
   B) ಹೆಪಟೈಟಿಸ್– ಬಿ ಲಸಿಕೆ
   C) ರೋಟಾವೈರಸ್ ಲಸಿಕೆ
   D) ಕೋವ್ಯಾಕ್ಸಿನ್

50. ಆಟಿಸ್ಮ್, ಸೆರೆಬ್ರಲ್ ಪಾಲ್ಸಿ, ಕೆಳಮಟ್ಟದ IQ ಮತ್ತು ಹಲವಾರು ಅಸಮರ್ಥತೆಗಳುಳ್ಳವರ ಹಕ್ಕುಗಳು ಮತ್ತು ಆರೈಕೆಯ ಕುರಿತು ಇರುವ ಕಾನೂನು

A) PWD ಕಾಯ್ದೆ, 1995
B) ಮಾನಸಿಕ ಆರೋಗ್ಯ ಕಾಯ್ದೆ, 1987
C) ರಾಷ್ಟ್ರೀಯ ಟ್ರಸ್ಟ್ ಕಾಯ್ದೆ, 1999
D) ಮೇಲಿನ ಯಾವುದೂ ಅಲ್ಲ

51. ಶಿಶುವಿಹಾರ/ಕಿಂಡರ್‌ಗಾರ್ಟನ್ ವ್ಯವಸ್ಥೆಯನ್ನು ಪರಿಚಯಿಸಿದವರು ಯಾರು ?

A) ಹೆನ್ರಿಚ್ ಪೆಸ್ಟಾಲೌಸಿ
B) ಜಾನ್ ಡ್ಯೂಯಿ
C) ಮರಿಯಾ ಮಾಂಟೆಸರಿ
D) ಫ್ರೆಡ್ರಿಕ್ ಫ್ರೋಬೆಲ್

52. ಶಿಶುವಿನ ಬುದ್ಧಿವಂತಿಕೆಯ ಬೆಳವಣಿಗೆಯ ಮೇಲೆ ಸಾಮಾಜಿಕ–ಸಾಂಸ್ಕೃತಿಕ ಪರಿಸರದ ಪ್ರಭಾವದ ಕುರಿತು ವೀಕ್ಷಣೆಯನ್ನು ನಡೆಸಿದವರು ಯಾರು ?

A) ಸಿಗ್‌ಮಂಡ್ ಫ್ರಾಡ್
B) ಲವ್ ವಿಗಾಟ್ಸ್ಕೀ
C) ಗಾರ್ಡ್‌ನರ್
D) ಬ್ರೂನರ್

53. 3 ವರ್ಷಗಳ ವಯಸ್ಸಿನಲ್ಲಿ ಮೆದುಳಿನ ಬೆಳವಣಿಗೆ ಎಷ್ಟಿರುತ್ತದೆ ?

A) 18%
B) 48%
C) 49%
D) 80%

54. ಭಾರತದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ?

A) 1957
B) 1995
C) 1975
D) 1985

55. ಟೆಟನಸ್ ರೋಗದಿಂದ ದೇಹದ ಯಾವ ಅಂಗಕ್ಕೆ ಸೋಂಕು ತಗಲುತ್ತದೆ ?

A) ಸಣ್ಣ ಕರುಳು
B) ಶ್ವಾಸಕೋಶಗಳು
C) ರಕ್ತದ ಚೀಲಗಳು
D) ಮಾಂಸಖಂಡಗಳು

56. ಜೋ ಬೌಲ್ಬಿಯವರು ಕೆಳಗಿನ ಯಾವ ಕ್ಷೇತ್ರದಲ್ಲಿ ತಮ್ಮ ಕೊಡುಗೆಗೆ ಪ್ರಸಿದ್ಧರಾಗಿದ್ದಾರೆ ?

A) ಮಗುವಿನ ಭೌತಿಕ ಬೆಳವಣಿಗೆ
B) ನವಜಾತ ಶಿಶು ಮತ್ತು ತಾಯಿಯ ನಡುವಿನ ಮೊದಲ ಸಂಬಂಧಗಳ ಅಭಿವೃದ್ಧಿಯ ವಿಕಸನದ ಕುರಿತು ಅಧ್ಯಯನಗಳು
C) ಮಕ್ಕಳಲ್ಲಿ ಬುದ್ಧಿವಂತಿಕೆಯ ಬೆಳವಣಿಗೆಯ ಹಂತಗಳು
D) ಬುದ್ಧಿವಂತಿಕೆಯ ಆಯಾಮಗಳು

57. ಪ್ರೀ ಸ್ಕೂಲ್ ಮಕ್ಕಳಿಗೆ ಯಾವ ಪ್ರೊಫಿಲಾಕ್ಸಿಸ್‌ನ್ನು ಒದಗಿಸಬೇಕು ?

A) ವಿಟಮಿನ್ ಎ, ಐರನ್ ಮಾತ್ರೆಗಳು
B) ಪಾರಾಸಿಟಮಾಲ್ ಮಾತ್ರೆಗಳು
C) ಕ್ಲಿನಿಫಿಕ್ಸ್
D) ಕಾನ್ಕೋರ್

58. 'ಕೋಕ್ಲಿಯರ್ ಇಂಪ್ಲಾಂಟನ್ನು' ಯಾವುದರ ಚಿಕಿತ್ಸೆ ವಿಧಾನವಾಗಿ ಬಳಸುತ್ತಾರೆ ?
A) ದೃಷ್ಟಿದುರ್ಬಲತೆ
B) ನಡೆಯಲು ಅಶಕ್ತತೆ
C) ಬುದ್ಧಿವಂತಿಕೆಯ ಕೊರತೆ
D) ಕೇಳುವ ದುರ್ಬಲತೆ

59. ಜೀನ್ ಪಿಯಾಜೆಯ ವಿಕಾಸ ಹಂತ ಸಿದ್ಧಾಂತದ ಪ್ರಕಾರ ಪ್ರೀಪ್ರೈಮರಿ ಮಗುವಿನ ಬೆಳವಣಿಗೆ ಹಂತ ಯಾವುದಾಗಿರುತ್ತದೆ ?
A) ಮೂರ್ತ ಕಾರ್ಯಕಾರಿ ಹಂತ
B) ಸಂವೇದನಾ ಚಲನಾ ಹಂತ
C) ಪೂರ್ವಭಾವಿ ಹಂತ
D) ಔಪಚಾರಿಕ ಕಾರ್ಯಕಾರಿ ಹಂತ

60. ಅಂತರ್ಗತ/ಸೇರ್ಪಡಿಸುವಿಕೆಯ ಶಿಕ್ಷಣದ ಸಿದ್ಧಾಂತವು ಪ್ರಸ್ತುತ ಜಗತ್ತಿನಲ್ಲಿ ಯಾವುದಕ್ಕೆ ಸೂಕ್ತವಾಗಿದೆ ?
A) ನೋಡು ಮತ್ತು ಕಲಿ ಅವಕಾಶ
B) ಮೌಲ್ಯಮಾಪನದ ಅವಕಾಶ
C) ಸಮಾನ ಕಲಿಯುವವರು
D) ಸಾಮಾಜಿಕ ಸೇರ್ಪಡೆಯನ್ನು ಪಡೆಯಲು ಸಹಕರಿಸುವುದು

61. ''ಡಿಸ್‌ಗ್ರಾಫಿಯಾ''ದ ರೋಗಲಕ್ಷಣಗಳು ಯಾವುವು ?
A) ಸೂಕ್ಷ್ಮವಾದ ಪುನರಾವರ್ತಿಕ ಕ್ರಿಯೆಗಳನ್ನು ಮಾಡಲು ಅಸಮರ್ಥತೆ
B) ಗಣಿತದ ಅಧ್ಯಯನ ನಡೆಸಲು ಅಸಮರ್ಥತೆ
C) ಬರೆಯಲು ಅಸಮರ್ಥತೆ
D) ಓದಲು ಅಸಮರ್ಥತೆ

62. ಭಾವನಾತ್ಮಕ ಬುದ್ಧಿವಂತಿಕೆ (1995) ಯ ಕುರಿತು ಪ್ರಸಿದ್ಧವಾದ ಪುಸ್ತಕವನ್ನು ಬರೆದವರು ಯಾರು ?
A) ಡೇನಿಯಲ್ ಗೋಲ್ಡ್‌ಮ್ಯಾನ್
B) ಪೀಟರ್ ಸಾಲೋವಾ
C) ಆಲ್‌ಫ್ರೆಡ್ ಬಿನೆ
D) ಚಾರ್ಲ್ಸ್ ಸ್ಪಿಯರ್‌ಮ್ಯಾನ್

63. 'ಚೌಕ ಮತ್ತು ಕೂಡಿಸುವ ಚಿಹ್ನೆಗಳನ್ನು ಬರೆಯುವುದು ಮತ್ತು 2 – 4 ಅಂಗಗಳನ್ನು ವಿವರಿಸುವ ಮೂಲಕ ಮಾನವನ ಚಿತ್ರ ಬರೆಯುವುದು' – ಇವು ಕಲಿಯುವವರ ಬೆಳವಣಿಗೆಯ ಕೆಳಗಿನ ಹಂತಗಳಲ್ಲಿ ಯಾವುದನ್ನು ವಿವರಿಸುತ್ತದೆ ?
A) ಸಾಮಾಜಿಕ ಬೆಳವಣಿಗೆ
B) ಭಾಷೆಯ ಬೆಳವಣಿಗೆ
C) ಸೂಕ್ಷ್ಮ ಪೇಶಿಯ ಬೆಳವಣಿಗೆ
D) ಸ್ಥೂಲ ಪೇಶಿಯ ಬೆಳವಣಿಗೆ

64. ವ್ಯಕ್ತಿತ್ವದ ಅಭಿವೃದ್ಧಿಯ ಗುಣಲಕ್ಷಣ (ಟ್ರೈಟ್)ಗಳ ಸಿದ್ಧಾಂತವನ್ನು ಪರಿಚಯಿಸಿದವರು ಯಾರು ?
A) ಅಲ್ಪಾಟ್
B) ಫ್ರಾಯ್ಡ್
C) ಆಡ್‌ಲರ್
D) ಕಾರ್ಲ್ ಯುಂಗ್

65. ಯಾವ ವಿಟಮಿನ್‌ನ ಕೊರತೆಯಿಂದ ನಿಕ್ಟಲೋಪಿಯಾ ಉಂಟಾಗುವುದು ?
A) ವಿಟಮಿನ್ ಡಿ
B) ವಿಟಮಿನ್ ಎ
C) ವಿಟಮಿನ್ ಸಿ
D) ವಿಟಮಿನ್ ಕೆ

66. ಕೆಳಗೆ ಸೂಚಿಸಿದವುಗಳಲ್ಲಿ ಆಧ್ಯಾತ್ಮಿಕ ಅಂಶಕ್ಕೆ ಸಂಬಂಧಿಸಿದ್ದು ಯಾವುದಾಗಿದೆ ?
   A) ಪ್ರಾಕೃತಿಕ ಪರಿಸ್ಥಿತಿಗೆ ಅನುಗುಣವಾಗುವಂತೆ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ
   B) ಕ್ರೀಡೆ ಮತ್ತು ನೃತ್ಯಗಳಲ್ಲಿ ನೈಪುಣ್ಯ
   C) ನಕ್ಷೆಗಳನ್ನು ಮಾಡುವ ಸಾಮರ್ಥ್ಯ
   D) ಲಯ ಮತ್ತು ಸಾಮರಸ್ಯಗಳನ್ನು ತಿಳಿದುಕೊಳ್ಳುವುದು

67. ‘ವಿಶ್ವ ವಿಕಲತೆ ದಿನ’ವನ್ನು ಯಾವಾಗ ಗಮನಿಸಲಾಗುತ್ತದೆ ?
   A) ಅಕ್ಟೋಬರ್ 3 B) ನವೆಂಬರ್ 3 C) ಡಿಸೆಂಬರ್ 3 D) ಜನವರಿ 3

68. ‘UNO ಪೌಷ್ಟಿಕ ದಶಕ’ವೆಂದು ಯಾವ ದಶಕವನ್ನು ಗಮನಿಸಲಾಗಿದೆ ?
   A) 2015 – 2024 B) 2012 – 2021 C) 2014 – 2024 D) 2016 – 2025

69. ‘ಸುಕನ್ಯಾ ಸಮೃದ್ಧಿ ಯೋಜನೆ’ಯ ಕುರಿತು ಕೆಳಗಿನವುಗಳಲ್ಲಿ ಸರಿಯಾದ ವಾಕ್ಯ ಯಾವುದು ?
   A) ಸುಶಿಕ್ಷಿತ ಯುವಕರಿಗೆ ಸ್ವ-ಉದ್ಯೋಗ
   B) ಹೆಣ್ಣು ಮಕ್ಕಳಿಗೆ ಕೇಂದ್ರ ಸರಕಾರದ ವತಿಯಿಂದ ಆರ್ಥಿಕ ಭದ್ರತಾ ಕಾರ್ಯಕ್ರಮ
   C) ಸ್ತ್ರೀ ಸಬಲೀಕರಣ ಮತ್ತು ಬಡತನ ನಿವಾರಣೆ ಕಾರ್ಯಕ್ರಮ
   D) ಗ್ರಾಮೀಣ ಸ್ತ್ರೀಯರಲ್ಲಿ ಉಳಿತಾಯದ ಅಭ್ಯಾಸವನ್ನು ಅಭಿವೃದ್ಧಿಸುವುದು

70. ಮೆಲನೈನ್ ಕೊರತೆಯಿಂದಾಗಿ ಚರ್ಮದಲ್ಲಿ ಯಾವ ರೋಗವು ಹುಟ್ಟಿಕೊಳ್ಳುತ್ತದೆ ?
   A) ಆಲ್ಬಿನಿಸ್ಮ್ B) ಕ್ವಾಶಿಯೋರ್ಕೋರ್ C) ಮರಸ್ಮಸ್ D) ಸೇಬಮ್

71. ಶಾಲಾ ಪದ್ಧತಿಯನ್ನು ‘10+ 2’ರಿಂದ ‘5+3+3+4’ಆಗಿ ಬದಲಾವಣೆಯನ್ನು ನಿರ್ದೇಶಿಸಿದವರು ಯಾರು ?
   A) NCF 2015 B) ರಾಷ್ಟ್ರೀಯ ಶಿಕ್ಷಣ ನೀತಿ 2020
   C) ಕೋಠಾರಿ ಆಯೋಗ D) ಮುದಲಿಯಾರ್ ಆಯೋಗ

72. ‘ಶಿಕ್ಷಣವು ಮಾನವನ ಸಂಪೂರ್ಣತೆಯಾಗಿದೆ’ ಎಂಬ ಅಭಿಪ್ರಾಯ ಯಾರದ್ದು ?
   A) ಕೋಮಿನಿಯಸ್ B) ಮಹಾತ್ಮಗಾಂಧಿ
   C) ಪ್ಲೇಟೊ D) ಸ್ವಾಮಿ ವಿವೇಕಾನಂದ

73. ಕೇರಳ ಸರಕಾರದ ಆಶ್ರಯದಲ್ಲಿ ‘ಅಮ್ಮತೊಟ್ಟಿಲ್’ ಯೋಜನೆಯಲ್ಲಿ ಕೆಳಗಿನವುಗಳಲ್ಲಿ ಯಾವುದು ಸೇರಿಕೊಂಡಿದೆ ?
   A) ಬುಡಕಟ್ಟು ಸಮುದಾಯದವರಿಗೆ ಪೌಷ್ಟಿಕಾಂಶಗಳ ಒದಗಿಸುವಿಕೆ
   B) ಕೃಷಿ, ನೀರಿನ ಸಂರಕ್ಷಣೆ
   C) ಅನಾಥರಾದ ನವಜಾತ ಶಿಶುಗಳ ದತ್ತು ಸ್ವೀಕಾರ
   D) ಬಸುರಿ ಹೆಂಗಸರಿಗೆ ಪೌಷ್ಟಿಕಾಂಶದ ಯೋಜನೆ

74. ಕಲಿಕೆಯ ಪರಿಣಾಮದ ಗುಣಲಕ್ಷಣ ಈ ಕೆಳಗಿನವುಗಳಲ್ಲಿ ಯಾವುದು ಆಗಿರುವುದಿಲ್ಲ ?

A) ವೀಕ್ಷಣಾ ಅಧ್ಯಯನ

B) ಅಳೆಯಬಹುದಾದ ಫಲಿತಾಂಶ

C) ದೀರ್ಘಾವಧಿ ಮತ್ತು ಅಲ್ಪಾವಧಿಗಳಲ್ಲಿ ಸಾಧಿಸಲು ಅಸಾಧ್ಯವಾದ ಗುರಿಗಳು

D) ಕಲಿಕೆಯ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವುದು

75. ದತ್ತು ಸ್ವೀಕಾರದ ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ, ದತ್ತು ಸ್ವೀಕರಿಸುವವ ಮತ್ತು ದತ್ತು ಸ್ವೀಕಾರಕ್ಕೆ ಇರುವವರ ನಡುವಿನ ವಯಸ್ಸಿನ ಅಂತರ ಕನಿಷ್ಠ ಎಷ್ಟಿರಬೇಕು ?

A) 28 ವರ್ಷಗಳು B) 25 ವರ್ಷಗಳು C) 23 ವರ್ಷಗಳು D) 20 ವರ್ಷಗಳು

76. ಮೌಖಿಕ ಪೋಲಿಯೋ ಲಸಿಕೆಯನ್ನು ಕಂಡುಹಿಡಿದವರು ಯಾರು ?

A) ಆಲ್ಬರ್ಟ್ ಸಬಿನ್ B) ಜನ್ನರ್ C) ಲೂಯಿಸ್ ಪಾಶ್ಚರ್ D) ಕ್ರಿಸ್ಟೆನ್ ಬಾರ್ನಾರ್ಡ್

77. ಒಂದು ಅಂಗನವಾಡಿಯ ನಿರ್ಮಾಣಕ್ಕಾಗಿ ಒಬ್ಬ ವ್ಯಕ್ತಿಯು 4 ಸೆಂಟ್ಸ್ ಜಾಗವನ್ನು ದಾನಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಭೂಮಿಯನ್ನು ಯಾರ ಹೆಸರಿನಲ್ಲಿ ನೋಂದಣಿ ಮಾಡಬೇಕು ?

A) ಅಂಗನವಾಡಿ ಶಿಕ್ಷಕ/ಶಿಕ್ಷಕಿ

B) ಗ್ರಾಮ ಪಂಚಾಯತ್ ಅಧ್ಯಕ್ಷ

C) ಯೋಗಕ್ಷೇಮ ವಿಭಾಗದ ಸ್ಥಾಯೀ ಸಮಿತಿಯ ಅಧ್ಯಕ್ಷ

D) ಗ್ರಾಮ ಪಂಚಾಯತ್ ಕಾರ್ಯದರ್ಶಿ

78. ಎಲುಬು ಮತ್ತು ಹಲ್ಲಿನ ಬೆಳವಣಿಗೆಗೆ ಅಗತ್ಯವಿರುವ ಮಿನರಲ್

A) ಸೋಡಿಯಮ್

B) ಕ್ಯಾಲ್ಸಿಯಮ್

C) ಮೆಗ್ನೀಶಿಯಂ

D) ಮೇಲಿನ ಯಾವುದೂ ಅಲ್ಲ

79. ಸಂವಿಧಾನದ 73, 74ನೆಯ ತಿದ್ದುಪಡಿಯ ಮೊದಲು ಪಂಚಾಯತ್ ರಾಜ್ ಮತ್ತು ಮುನ್ಸಿಪಲ್ ಕಾರ್ಪೊರೇಶನ್‌ಗಳಿಗೆ ಸಂಬಂಧಿಸಿದ ಎಷ್ಟನೆಯ ತಿದ್ದುಪಡಿಯನ್ನು ಸಂವಿಧಾನದಲ್ಲಿ ಅಂಗೀಕರಿಸಿರಲಿಲ್ಲ ?

A) 60, 61 B) 59, 60 C) 62, 63 D) 64, 65

80. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಶಾಲೆಯೆಂದು ವಿವರಿಸಿದವರು ಯಾರು ?

A) ಜಯಪ್ರಕಾಶ್ ನಾರಾಯಣ್

B) ಬಲವಂತ ರಾಯ್ ಮೆಹ್ತಾ

C) ಎಮ್. ಎಲ್. ರಾಯ್

D) ಎಸ್.ಕೆ. ಡೇ

81. ಭೂ ತಿದ್ದುಪಡಿ ಕಾಯ್ದೆಯ ಅಸ್ತ್ರವನ್ನಾಗಿ ಪಂಚಾಯತ್ ರಾಜ್‌ನ್ನು ಬಳಸಿಕೊಂಡ ರಾಜ್ಯ ಯಾವುದು ?

A) ಜಮ್ಮು ಮತ್ತು ಕಾಶ್ಮೀರ B) ಪಶ್ಚಿಮ ಬಂಗಾಳ C) ಕರ್ನಾಟಕ D) ಕೇರಳ

82. ಮೂರು ವರ್ಷಗಳ ಅನಂತರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಿದ ರಾಜ್ಯ ಯಾವುದು ?
A) ಸಿಕ್ಕಿಂ B) ತಮಿಳುನಾಡು C) ಕರ್ನಾಟಕ D) ಮಹಾರಾಷ್ಟ್ರ

83. ಕುದುಂಬಶ್ರೀ ಕಾರ್ಯಕ್ರಮದ ಚಟುವಟಿಕೆಯನ್ನು ಕೇರಳದ ಯಾವ ಜಿಲ್ಲೆಯು ಆರಂಭಿಸಿತು ?
A) ತ್ರಿಶೂರ್ B) ಮಲಪ್ಪುರಮ್ C) ಆಳಪ್ಪುಳ್ಹ D) ವಯನಾಡ್

84. ಈ ಕೆಳಗಿನವುಗಳಲ್ಲಿ ಯಾವುದರಲ್ಲಿ ಕೇರಳದ ಒಂದು ಬ್ಲಾಕ್ ಪಂಚಾಯತ್‌ನಲ್ಲಿ ಎರಡು ಪಂಚಾಯತಿಗಳಿವೆ ?
A) ಅಟ್ಟಪ್ಪಾಡಿ B) ಪಾಲಕ್ಕಾಡ್ C) ಕೋಳ್ಹಿಕೋಡ್ D) ಅರಯೆಡ್

85. ಕೆಳಗಿನವುಗಳಲ್ಲಿ ಸರಿಯಲ್ಲದ ಹೇಳಿಕೆ ಯಾವುದು ?
ಗ್ರಾಮ ಸಭೆ :
A) ವಾರ್ಡಿನ ಎಲ್ಲಾ ಮತದಾರರ ಸಭೆ.
B) ಫಲಾನುಭವಿಗೆ ಚುನಾವಣೆಯನ್ನು ಗ್ರಾಮ ಸಭೆಯಲ್ಲಿ ನಡೆಸಲಾಗುತ್ತದೆ.
C) ಗ್ರಾಮ ಸಭೆಯು ಎರಡು ತಿಂಗಳುಗಳಿಗೊಮ್ಮೆ ಸೇರಬೇಕು.
D) ಸಾಕಷ್ಟು ಸದಸ್ಯರ ಅಭಾವವಿದ್ದಲ್ಲಿ ಗ್ರಾಮ ಸಭೆಯನ್ನು ಪುನರ್‌ನಿರ್ವಹಿಸಬೇಕು.

86. ವಾರ್ಡ್ ಸಮಿತಿಗೆ ಯಾವುದು ಸೂಕ್ತವೆನಿಸುವುದಿಲ್ಲ ?
i) ಕಾರ್ಪೋರೇಶನ್‌ಗೆ
ii) ನಗರಸಭೆಯಲ್ಲಿ 50,000ಕ್ಕಿಂತ ಅಧಿಕ ಜನಸಂಖ್ಯೆ ಇದ್ದರೆ
iii) ನಗರಸಭೆಯಲ್ಲಿ 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದರೆ
iv) ಸಣ್ಣ ನಗರಸಭೆಗೆ
A) (i), (ii), (iii) B) (ii), (iv) C) (i), (iii), (iv) D) (i), (ii), (iv)

87. ಗ್ರಾಮಸಭೆಯ ಆಡಳಿತದಡಿಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಬರುವುದಿಲ್ಲ ?
i) ಫಲಾನುಭವಿಯ ಪಟ್ಟಿಯನ್ನು ಅನುಮೋದಿಸುವುದು.
ii) ಮತದಾರರ ಪಟ್ಟಿಯನ್ನು ನವೀಕರಿಸುವುದು.
iii) ಅಭಿವೃದ್ಧಿ ದಿಕ್ಸೂಚಿಗಳಿಗಾಗಿ ನಿರ್ದೇಶನ ನೀಡುವುದು.
iv) ವಾರ್ಡ್ ಮಟ್ಟದ ಮತದಾರರ ಪಟ್ಟಿಯನ್ನು ಸರಿಪಡಿಸುವುದು.
A) (i), (iii) B) (i), (ii) C) (iii), (iv) D) (ii), (iv)

88. ಈ ಕೆಳಗಿನವುಗಳಲ್ಲಿ ಜಾಗೃತ ಸಮಿತಿಯ ಜವಾಬ್ದಾರಿ ಯಾವುದು ಆಗಿರುವುದಿಲ್ಲ ?
i) ಮಹಿಳಾ ದೌರ್ಜನ್ಯದ ವಿರುದ್ಧ ದೂರುಗಳನ್ನು ಸ್ವೀಕರಿಸುವುದು.
ii) ಸ್ಥಳೀಯ ಸ್ವಯಂ-ಆಡಳಿತ ಸಂಸ್ಥೆಯಲ್ಲಿ ಮಹಿಳಾ ರಕ್ಷಣೆಯ ನಿಯಮವನ್ನು ರೂಪಿಸುವುದು.
iii) ಹಿರಿಯರ ರಕ್ಷಣೆ.
iv) ಮಹಿಳಾ ದೌರ್ಜನ್ಯದ ವಿರುದ್ಧ ಕ್ರಿಯಾಶೀಲರಾಗುವುದು.
A) (i), (ii) B) (ii), (iii) C) (iii), (iv) D) (i), (iv)

89. ಈ ಕೆಳಗಿನ ಕಾಯ್ದೆಗಳಲ್ಲಿ ಮಹಿಳೆಯರಿಗೆ ಕೇರಳ ಪಂಚಾಯತ್ ರಾಜ್ ವ್ಯವಸ್ಥೆಯಡಿಯಲ್ಲಿ ಯಾವುದು ಬರುವುದಿಲ್ಲ ?
   i) ಕೇವಲ ಜನ ಪ್ರತಿನಿಧಿ ಸ್ಥಾನಗಳಿಗೆ 50% ಮೀಸಲಾತಿ.
   ii) ಜನ ಪ್ರತಿನಿಧಿ ಸ್ಥಾನ ಮತ್ತು ಪದವಿಗೆ 50% ಮೀಸಲಾತಿ.
   iii) ಮಹಿಳಾ ಅಭಿವೃದ್ಧಿಗೆ ವಿಶೇಷ ಯೋಜನೆ.
   iv) ಒಂದೇ ಚುನಾವಣಾ ಕ್ಷೇತ್ರದಲ್ಲಿ ಮಹಿಳಾ ಪ್ರತಿನಿಧಿಗೆ ಎರಡನೆಯ ಬಾರಿ ಅವಕಾಶ.
   A) (i), (ii) B) (i), (iv) C) (ii), (iii) D) (iii), (iv)

90. ಕೆಳಗಿನವುಗಳಲ್ಲಿ ಯಾವ ವಾಕ್ಯವು ಸರಿಯಾಗಿಲ್ಲ ?
   A) ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಅಭಿವೃದ್ಧಿಯಲ್ಲಿ ನಾಯಕತ್ವವು ಸಮಾಜ ಯೋಗಕ್ಷೇಮ ಸ್ಥಾಯಿ ಸಮಿತಿಗೆ.
   B) ಅಭಿವೃದ್ಧಿ ಕಾರ್ಯಕ್ರಮವನ್ನು ಯೋಜಿಸುವ ಜವಾಬ್ದಾರಿಯು ಅಭಿವೃದ್ಧಿಶೀಲ ಸ್ಥಾಯಿ ಸಮಿತಿಯ ಕೈಯಲ್ಲಿದೆ.
   C) ಸ್ಟೀರಿಂಗ್ ಸಮಿತಿಯು ಕೇವಲ ಪಂಚಾಯತ್ ಅಧ್ಯಕ್ಷ ಮತ್ತು ಕಾರ್ಯದರ್ಶಿಯನ್ನೊಳಗೊಂಡಿರುತ್ತದೆ.
   D) ಗ್ರಾಮ ಸಭೆಯನ್ನು ಆಡಳಿತ ಮಂಡಳಿಯೆಂದು ಪರಿಗಣಿಸಲಾಗಿದೆ.

91. ಕೇರಳ ಮಹಿಳಾ ಸೇರ್ಪಡೆ ನೀತಿಗೆ ಸಂಬಂಧಿಸಿದ ಕೆಳಗಿನ ವಾಕ್ಯಗಳಲ್ಲಿ ಯಾವುದು ಸೂಕ್ತವಾಗಿಲ್ಲ ?
   i) ಸ್ವಯಂ – ಆಡಳಿತ ನಡೆಸುವ ಸಂಸ್ಥೆಗಳು 10% ಶೇರ್‌ಗಳನ್ನು ಬದಿಗಿಡಬೇಕು.
   ii) ಈ ಹಣವನ್ನು ಮಹಿಳೆಯರು ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಬಳಸಬೇಕು.
   iii) ಅಗತ್ಯವಿದ್ದಲ್ಲಿ ಹಣವನ್ನು ಇತರ ತುರ್ತು ಯೋಜನೆಗಳಿಗೆ ಬಳಸಬಹುದು.
   iv) ಮಹಿಳೆಯರ ಸೇರ್ಪಡೆ ನೀತಿ ಯೋಜನೆಯನ್ನು ICDS ಅಧಿಕಾರಿಯು ಯೋಜಿಸಬೇಕು.
   A) (i), (ii) B) (ii), (iii) C) (i), (iv) D) (iii), (iv)

92. ಗ್ರಾಮ ಪಂಚಾಯತ್ ಸ್ಥಾಯಿ ಸಮಿತಿಗೆ ಸೂಕ್ತವೆನಿಸದ್ದು ಈ ಕೆಳಗಿನವುಗಳಲ್ಲಿ ಯಾವುದು ?
   A) ಅಭಿವೃದ್ಧಿ B) ಸಮಾಜ ಕಲ್ಯಾಣ
   C) ಸಾರ್ವಜನಿಕ ಕಾರ್ಯಗಳು D) ಹಣಕಾಸು

93. ಈ ಕೆಳಗಿನವುಗಳಲ್ಲಿ ಯಾವುದು ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ನಿಯೋಗದ ಭಾಗ ಆಗಿರುವುದಿಲ್ಲ ?
   A) ಭಾರತಾದ್ಯಂತ ಈ ಯೋಜನೆಯಡಿಯಲ್ಲಿ ಕೇರಳದ ಕುದುಂಬಶ್ರೀ ಕಾರ್ಯಕ್ರಮದ ಪ್ರತಿಪಾದನೆ
   B) ಸ್ವ–ಸಹಾಯ ಸಂಘದ ಮೂಲಕ ಈ ಯೋಜನೆಯು ಕಾರ್ಯರೂಪಕ್ಕೆ ಬಂದಿದೆ
   C) ಈ ಯೋಜನೆಯು ಕೇವಲ ಆಯ್ದ ರಾಜ್ಯಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ
   D) ಈ ಯೋಜನೆಯಡಿಯಲ್ಲಿ ಮಹಿಳೆಯರಲ್ಲಿ ಉಳಿತಾಯದ ಅಭ್ಯಾಸವನ್ನು ಪ್ರೋತ್ಸಾಹಿಸುವುದು ಮತ್ತು ಹೊಸ ತೊಡಗಿಕೆಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ

94. ಮಂಗಳಮುಖಿಯರ ನೀತಿಯನ್ನು ಅಳವಡಿಸಿಕೊಂಡ ರಾಜ್ಯ ಯಾವುದು ?
A) ಮಹಾರಾಷ್ಟ್ರ B) ಉತ್ತರಪ್ರದೇಶ C) ಪಶ್ಚಿಮಬಂಗಾಲ D) ಕೇರಳ

95. ಭಾರತದಲ್ಲಿ ಪ್ರಥಮ ಬಾರಿಗೆ ನೆಹರೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಜಸ್ಥಾನದ _________ ನಲ್ಲಿ ಉದ್ಘಾಟಿಸಲಾಯಿತು.
A) ಬಿಲ್ವಾಡ B) ನಾಗ್ಪುರ C) ಉದಯಪುರ್ D) ಜೈಪುರ

96. ಕೇರಳದ ಯಾವ ಮೊದಲ ಜಿಲ್ಲೆಯು ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಉದ್ಯೋಗ ಯೋಜನೆಯನ್ನು ಅಳವಡಿಸಿಕೊಂಡಿವೆ ?
A) ವಯನಾಡ್, ಕಾಸರಗೋಡ್, ತ್ರಿಶೂರ್, ಇಡುಕ್ಕಿ
B) ಇಡುಕ್ಕಿ, ಕಾಸರಗೋಡ್, ಕೊಟ್ಟಾಯಮ್, ಅಳಪ್ಪುಳ್ಹ
C) ತಿರುವನಂತಪುರಮ್, ಕೊಲ್ಲಮ್, ಎರ್ನಾಕುಲಮ್, ಅಳಪ್ಪುಳ್ಹ
D) ಪಾಲಕ್ಕಾಡ್, ವಯನಾಡ್, ಕಾಸರಗೋಡ್, ಇಡುಕ್ಕಿ

97. ಗ್ರಾಮ ಪಂಚಾಯತ್‌ಗೆ ಮಾದರಿಯಾಗಿರುವ ರಲೇಗನ್ ಸಿದ್ಧಿ ಯಾವ ರಾಜ್ಯದಲ್ಲಿದೆ ?
A) ಗುಜರಾತ್ B) ರಾಜಸ್ಥಾನ್ C) ಮಹಾರಾಷ್ಟ್ರ D) ಆಂಧ್ರಪ್ರದೇಶ

98. ಜನಕೀಯ ಹೋಟೇಲ್‌ಗಳು ಯಾವ ಯೋಗಕ್ಷೇಮ ಯೋಜನೆಯಡಿಯಲ್ಲಿ ಸ್ಥಾಪನೆಗೊಂಡವು ?
A) ಆಶ್ರಯ
B) ಬಡತನದ ರೇಖೆಯ ಕೆಳಗೆ ಬರುವ ಜನಸಂಖ್ಯೆಯನ್ನು ಹುಡುಕುವುದು
C) ಕೇರಳದಿಂದ ಅನಾಥರನ್ನು ನಿರ್ಮೂಲನೆ ಮಾಡುವುದು
D) ಹಸಿವಿನಿಂದ ಮುಕ್ತ ಕೇರಳ

99. ಕೇರಳ ಮಾದರಿಯ ಯೋಗಕ್ಷೇಮ ಕ್ರಮವನ್ನು ಇತರ ಭಾರತೀಯ ಪಂಚಾಯಿತಿಗಳಲ್ಲಿ ________ ಮೂಲಕ ಅಳವಡಿಸಿಕೊಳ್ಳಲಾಗಿದೆ.
A) ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ
B) ಗ್ರಾಮ ಪಂಚಾಯತ್ ವಿಕಸನ ಯೋಜನೆ
C) ಗ್ರಾಮ ಪಂಚಾಯತ್ ಪ್ರಜಾಪ್ರಭುತ್ವದ ಯೋಜನೆ
D) ಗ್ರಾಮ ಪಂಚಾಯತ್ ಪ್ರಜಾಪ್ರಭುತ್ವ ಅಭಿವೃದ್ಧಿ ಯೋಜನೆ

100. 'ರೀಕನ್‌ಸ್ಟ್ರಕ್ಷನ್ ಆಫ್ ಇಂಡಿಯನ್ ಪಾಲಿಟಿ'ಯ ಲೇಖಕ ಯಾರು ?
A) ಮಹಾತ್ಮ ಗಾಂಧಿ B) ಜಯಪ್ರಕಾಶ್ ನಾರಾಯಣ್
C) ರಾಮ್ ಮನೋಹರ್ ಲೋಹಿಯಾ D) ಎಮ್. ಎನ್. ರಾಯ್

**Space for Rough Work**